
# ಸಾಧನೆ, ಸಿದ್ಧತೆ



✿ **ಚಿ**ತ್ತಶುದ್ಧಿಯಾಯಿತು ಎಂದರೆ, ವಿಷಯಾಸಕ್ತಿ ಹೊರಟುಹೋಯಿತು ಅಂದರೆ, ವ್ಯಾಕುಲತೆಯುಂಟಾಗುತ್ತದೆ. ಆಗ ಮಾತ್ರವೇ ನಿನ್ನ ಪ್ರಾರ್ಥನೆ ಭಗವಂತನನ್ನು ಮುಟ್ಟುತ್ತದೆ.



ಟೆಲಿಗ್ರಾಫ್ ತಂತಿಯಲ್ಲಿ ಬೇರೆ ವಸ್ತು ಬೆರೆತು ಕೊಂಡಿದ್ದರೆ ಅಥವಾ ಅದು ಕಿತ್ತು ಹೋಗಿದ್ದರೆ ವಾರ್ತೆಯನ್ನು ಅದು ಹೊತ್ತುಕೊಂಡು ಹೋಗಲಾರದು.

✿ **ಭ**ಗವನ್ನಾಮೋಚ್ಚಾರಣೆಯಿಂದ ಮನುಷ್ಯ ಪವಿತ್ರನಾಗಿಬಿಡುತ್ತಾನೆ. ಆದ್ದರಿಂದ ನಾಮಕೀರ್ತನೆಯ ಅಭ್ಯಾಸವನ್ನಿಟ್ಟುಕೊಂಡಿರಬೇಕು. ನಾನು ಯದುಮಲ್ಲಿಕನ ತಾಯಿಗೆ ಹೇಳಿದೆ: 'ಪ್ರಾಪಂಚಿಕನಿಗೆ ಸಾಯುವ ಸಮಯದಲ್ಲಿ ಸಂಸಾರದ–ಎಂದರೆ ಹೆಂಡತಿ ಮಕ್ಕಳು ಮರಿಗಳ ಉಯಿಲು ಬರೆದಿಡುವುದು ಇವೇ ಮೊದಲಾದುವುಗಳ ಯೋಚನೆಗಳೇ ಬರುತ್ತವೆ. ಭಗವದ್ಭಾವನೆ ಮನಸ್ಸಿನಲ್ಲಿ ಏಳದು. ಇದಕ್ಕೆ ಮಾರ್ಗ ಬದುಕಿರುವಾಗ ನಾಮಜಪಕೀರ್ತನೆಯ ಅಭ್ಯಾಸವನ್ನಿಟ್ಟುಕೊಂಡಿರುವುದೇ.





ಈ ಅಭ್ಯಾಸವನ್ನು ಇಟ್ಟುಕೊಂಡಿದ್ದುದೇ ಆದರೆ ಸಾಯುವ ಸಮಯದಲ್ಲಿ ಭಗವನ್ನಾಮ ಬಾಯಿಂದ ಹೊರಡುತ್ತದೆ. ಗಿಳಿಯನ್ನು ಬೆಕ್ಕು ಹಿಡಿಯಿತು ಎಂದರೆ ಆಗ ಅದು ''ಕ್ಯಾ, ಕ್ಯಾ'' ಅಂತ ಕೂಗಿಕೊಳ್ಳುತ್ತದೆಯೇ ವಿನಾ, ''ರಾಮ, ರಾಮ, ಹರೇ ಕೃಷ್ಣ!'' ಅಂತ ಹೇಳುವುದಿಲ್ಲ.

✿ **ಕೈ**ಗೆ ಎಣ್ಣೆ ಸವರಿಕೊಂಡು ಹಲಸಿನಹಣ್ಣು ಬಿಡಿಸಿದರೆ ಅಂಟು ಕೈಗೆ ಅಂಟುವುದಿಲ್ಲ. ಕಣ್ಣುಮುಚ್ಚಾಲೆ ಯಾಟ ವಾಡುವಾಗ ಅಜ್ಜಿಯನ್ನು ಮುಟ್ಟಿಬಿಟ್ಟದ್ದೇ ಆದರೆ, ನಿಶ್ಚಿಂತೆಯಿಂದ ಇದ್ದುಬಿಡಬಹುದು. ಒಮ್ಮೆ ಸ್ಪರ್ಶಮಣಿಯನ್ನು ಮುಟ್ಟಿ ಚಿನ್ನವಾಗಿಬಿಡಿ. ಬಳಿಕ ನಿಮ್ಮನ್ನು ಒಂದು ಸಾವಿರ ವರ್ಷ ಮಣ್ಣಿನೊಳಗೆ ಹೂತಿಟ್ಟದ್ದು ಹೊರಕ್ಕೆ ತೆಗೆದರೂ ಚಿನ್ನವಾಗಿಯೇ ಉಳಿದಿರುತ್ತೀರಿ.



✿ **ಸಾ**ತ್ತ್ವಿಕ ಭಕ್ತನಲ್ಲಿ ಯಾವ ವಿಧವಾದ ಬಾಹ್ಯ ಪೂಜೆಯ ಆಡಂಬರವಿರುವುದಿಲ್ಲ. ಆತ ಪೂಜೆ ಮಾಡುತ್ತಿರುವುದು ಜನರಿಗೆ ಗೊತ್ತೇ ಇರುವುದಿಲ್ಲ. ಹೂವು ಇಲ್ಲದೆ ಇತ್ತು ಎಂದರೆ ಬಿಲ್ವಪತ್ರೆ, ಗಂಗಾಜಲ ಇವುಗಳಿಂದಲೇ ಪೂಜೆ ಮಾಡಿ ಬಿಡುತ್ತಾನೆ. ಆತನ ನೈವೇದ್ಯಕ್ಕೆ ಒಂದು ಹಿಡಿ ಬೆಲ್ಲದ ಪುರಿಯೋ ಅಥವಾ ಒಂದೆರಡು ಬತ್ತಾಸವೋ ಇದ್ದರೆ ಸಾಕು. ಅಪರೂಪಕ್ಕೆ ಒಮ್ಮೊಮ್ಮೆ ಭಗವಂತನಿಗೆ ಪಾಯಸ ಮಾಡಿ ಅರ್ಪಿಸುತ್ತಾನೆ.

'ಶ್ರೀರಾಮಕೃಷ್ಣ ವಚನವೇದ'ದಿಂದ